1. ಯೋಜನೆ	03.00	14.45
2. ಯೋಜನೇತರ	34.92	17.47
3. ಅಂತರರಾಷ್ಟ್ರೀಯ ಫಿಲ್ಮೋತ್ಸವ	8.66	–
ಒಟ್ಟು	46.58	31.92

ಆ. ಕಬ್ಬನ್ ಉದ್ಯಾನವನ:

1. ಯೋಜನೆ	10.00	4.25
2. ಯೋಜನೇತರ	13.25	8.75
3. ಅಂತರರಾಷ್ಟ್ರೀಯ ಫಿಲ್ಮೋತ್ಸವ	04.04	–
ಒಟ್ಟು	27.29	13.00

ಇ. ಇಲ್ಲ

ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿರುವ ಜಿಲ್ಲೆಗಳು

(1154): ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಔರಾದ್):– ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬೆಳೆಯುತ್ತಿರುವ ಜಿಲ್ಲೆಗಳು ಯಾವುವು;

ಆ. ಈ ಜಿಲ್ಲೆಗಳಲ್ಲಿನ ರೈತರು ಬೆಳೆಯುತ್ತಿರುವ ಜೋಳವನ್ನು ಬೆಂಬಲ ಬೆಲೆ ನೀಡಿ ಸರ್ಕಾರವು ಕೊಳ್ಳುವ ಬಗ್ಗೆ ಕ್ರಮ ಕೈಗೊಳ್ಳುವುದೇ ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಕೃಷಿ ಸಚಿವರು):–

ಅ. ರಾಜ್ಯದಲ್ಲಿ ಜೋಳದ ಬೆಳೆಯನ್ನು ಹೆಚ್ಚಾಗಿ ಬಿಜಾಪುರ, ಗುಲ್ಬರ್ಗಾ, ಬೀದರ್, ಬೆಳಗಾಂ, ಬಳ್ಳಾರಿ, ರಾಯಚೂರು, ಧಾರವಾಡ ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಬೆಳೆಯಲಾಗುತ್ತಿದೆ.

ಆ. ಭಾರತ ಸರ್ಕಾರವು 1992–93ನೇ ಸಾಲಿನ ಒರಟು ಧಾನ್ಯಗಳ ಸಂಗ್ರಹಣೆ ನೀತಿಯಲ್ಲಿ ಜೋಳವನ್ನು (ಎಫ್.ಎ.ಕ್ಯೂ – ಉತ್ತಮ ಗುಣಮಟ್ಟದ) ಬೆಂಬಲ ಬೆಲೆಯಲ್ಲಿ ಖರೀದಿಸಲು ಪ್ರತಿ ಕ್ವಿಂಟಾಲ್‌ಗೆ ರೂ: 240–00 ನ್ನು ನಿಗದಿ ಮಾಡಿರುತ್ತದೆ. ಇದುವರೆಗೂ ಬಿಳಿ ಜೋಳದ ಮಾರುಕಟ್ಟೆ ದರ ಬೆಂಬಲ ಬೆಲೆಗಿಂತ ಕಡಿಮೆಯಾಗಿರುವುದಿಲ್ಲ. ಹೈಬ್ರಿಡ್ ಜೋಳದ ಮಾರುಕಟ್ಟೆ ದರ ಕೆಲವೊಂದು ಪ್ರದೇಶಗಳಲ್ಲಿ ಬೆಂಬಲ ಬೆಲೆಗಿಂತ ಕಡಿಮೆಯಾಗಿರುತ್ತದೆ. ಆದರೆ ಹೈಬ್ರಿಡ್ ಜೋಳವು ಹೆಚ್ಚು ಅವಧಿಯವರೆಗೆ ಸಂಗ್ರಹಿಸಿಡಲು ಸಾಧ್ಯವಿರುವುದಿಲ್ಲ. ಆದಕಾರಣ ಇದನ್ನು ಬೆಂಬಲ ಬೆಲೆಯಲ್ಲಿ ಸಾರ್ವಜನಿಕ ಪಡಿತರ ವಿತರಣೆಗಾಗಿ ಖರೀದಿಸುವ ಕಾರ್ಯಕ್ರಮವಿರುವುದಿಲ್ಲ.

ಮುಲ್ಕಿಯಲ್ಲಿ ಸಬ್–ರಿಜಿಸ್ಟ್ರಾರ್ ಕಾರ್ಯಾಲಯ ಕಟ್ಟಡ

(1171): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ. ಮುಲ್ಕಿಯಲ್ಲಿ ಸಬ್–ರಿಜಿಸ್ಟ್ರಾರ್ ಕಟ್ಟಡ ಹಳೇಯದಾಗಿದ್ದು, ಈ ಕಟ್ಟಡವನ್ನು ಬಿಟ್ಟು ಬೇರೆ ಬಾಡಿಗೆ ಕಟ್ಟಡದಲ್ಲಿ ಕಾರ್ಯ ಪ್ರಾರಂಭಿಸಿ ಎಷ್ಟು ಸಮಯವಾಯಿತು;

ಆ. ಈಗ ತಿಂಗಳೊಂದಕ್ಕೆ ಕೊಡಲಾಗುತ್ತಿರುವ ಬಾಡಿಗೆ ಎಷ್ಟು;

ಇ. ಹಿಂದಿನ ಕಟ್ಟಡದ ಸ್ಥಳದಲ್ಲಿ ಹೊಸ ಕಟ್ಟಡವನ್ನು ಯಾವಾಗ ಕಟ್ಟಲಾಗುವುದು;

ಈ. ಹಳೇ ಕಟ್ಟಡವನ್ನು ಹಾಗೆಯೇ ಬಿಟ್ಟರೆ ಅದು ಕುಸಿದು ಬೀಳುವ ವಿಷಯವು ಸರ್ಕಾರದವರ ಗಮನಕ್ಕೆ ಬಂದಿದೆಯೇ;

ಉ. ಹೊಸ ಕಟ್ಟಡದ ರಚನೆ ತಡವಾಗಲು ಕಾರಣವೇನು ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಆ. ದಿನಾಂಕ: 1–1–1991ರಿಂದ

ಆ. ತಿಂಗಳಿಗೆ ರೂ. 2,089–00

ಇ. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಮತ್ತು ನೀಲಿ ನಕ್ಷೆ ಬಂದ ನಂತರ ಪರಿಶೀಲಿಸಲಾಗುವುದು.

ಈ. ಶಿಥಿಲವಾಗಿರುವುದರಿಂದ ಹೊಸ ಕಟ್ಟಡ ಕಟ್ಟಲು ಯೋಜಿಸಿದೆ.

ಉ. ಲೋಕೋಪಯೋಗಿ ಇಲಾಖೆಯಿಂದ ಅಂದಾಜು ಪಟ್ಟಿ ಹಾಗೂ ನೀಲಿ ನಕ್ಷೆ ಬಂದಿರುವುದಿಲ್ಲ. ಬಂದ ನಂತರ ಪರಿಶೀಲಿಸಿ ಅನುದಾನ ಪಡೆದು ಕ್ರಮ ಕೈಗೊಳ್ಳಲಾಗುವುದು.

ಬೆಂಗಳೂರು ನಗರದಲ್ಲಿರುವ ಶ್ರೀ ಕಾರಂಜಿ ಆಂಜನೇಯ ಸ್ವಾಮಿ ಮತ್ತು ಶ್ರೀ ದೊಡ್ಡ ಬಸವಣ್ಣ ದೇವಸ್ಥಾನಗಳ ಮುಜರಾಯಿ ಜಮೀನು

(1947): ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ):– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಎ. ಬೆಂಗಳೂರು ನಗರದಲ್ಲಿರುವ ಶ್ರೀ ಕಾರಂಜಿ ಆಂಜನೇಯಸ್ವಾಮಿ ಮತ್ತು ಶ್ರೀ ದೊಡ್ಡ ಬಸವಣ್ಣ ದೇವಸ್ಥಾನಗಳ ಮುಜರಾಯಿ ಜಮೀನುಗಳನ್ನು ಬಿ.ಎಂ.ಎಸ್. ವಿದ್ಯಾಸಂಸ್ಥೆಗೆ ಗುತ್ತಿಗೆಗೆ ನೀಡಲಾಗಿದೆಯೇ;

ಬಿ. ಹಾಗಿದ್ದಲ್ಲಿ, ಗುತ್ತಿಗೆಗೆ ನೀಡಲಾಗಿರುವ ಜಮೀನಿನ ವಿಸ್ತೀರ್ಣವೆಷ್ಟು;

ಸಿ. ಈ ಜಮೀನುಗಳಿಗೆ ನಿಗದಿಪಡಿಸಿರುವ ಗುತ್ತಿಗೆ ಅವಧಿ, ಬಾಡಿಗೆ ಮತ್ತು ಗುಡ್‌ವಿಲ್ ಎಷ್ಟು;

ಡಿ. ಬಾಡಿಗೆ ಮತ್ತು ಗುಡ್‌ವಿಲ್ ಮೊತ್ತವನ್ನು ಆ ಪ್ರದೇಶದ ಈಗಿನ ಮಾರ್ಕೆಟ್ ದರಕ್ಕೆ ಅನುಗುಣವಾಗಿ ನಿಗದಿಪಡಿಸಲಾಗಿದೆಯೇ;

ಎಫ್. ಗುತ್ತಿಗೆಗೆ ನೀಡುವ ಮುನ್ನ ಬೆಂಗಳೂರು ಜಿಲ್ಲಾಧಿಕಾರಿಗಳ ವರದಿ ಪಡೆಯಲಾಗಿತ್ತೇ;

ಜಿ. ಸರ್ಕಾರವು ಈ ಜಮೀನುಗಳ ಗುತ್ತಿಗೆಯ ಮಂಜೂರಾತಿಯನ್ನು ರದ್ದುಪಡಿಸಿ, ಸರ್ಕಾರಿ ಸಂಸ್ಥೆಗಳಿಗೆ ನೀಡುವ ಬಗ್ಗೆ ಕ್ರಮ ತೆಗೆದುಕೊಳ್ಳಲಾಗುವುದೇ ?

ಶ್ರೀ ಎಂ. ರಾಜಶೇಖರಮೂರ್ತಿ (ಕಂದಾಯ ಸಚಿವರು):–

ಎ. ಹೌದು